D.El.Ed

Question Paper














Code No. : **302-EK**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು, 560 003

KARNATAKA SECONDARY EDUCATION EXAMINATION BOARD, MALLESHWARAM, BENGALURU, 560 003

ಪ್ರಥಮ ವರ್ಷದ ಡಿ.ಎಲ್.ಇಡ್. ಮುಖ್ಯ ಪರೀಕ್ಷೆ, ಜುಲೈ, 2022

First Year D.El.Ed. Main Examination, July, 2022

Subject / ವಿಷಯ	:	**Education — Introduction to Basic Concepts** **ಶಿಕ್ಷಣ – ಮೂಲ ಪರಿಕಲ್ಪನೆಗಳ ಪರಿಚಯ**
Date of Exam. / ಪರೀಕ್ಷೆಯ ದಿನಾಂಕ	:	05. 07. 2022
Maximum Marks / ಗರಿಷ್ಠ ಅಂಕಗಳು	:	60
Duration of Exam. / ಪರೀಕ್ಷೆ ಅವಧಿ	:	3 hours / 3 ಗಂಟೆಗಳು
Time / ಸಮಯ	:	10.00 A.M. to 1.00 P.M.

ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು / General Instructions to the Candidates :

1. ಅಭ್ಯರ್ಥಿಗಳು ತನ್ನ ನೋಂದಣಿ ಸಂಖ್ಯೆಯನ್ನು ಪ್ರವೇಶ ಪತ್ರದಲ್ಲಿ ಮುದ್ರಿಸಿರುವಂತೆಯೇ ಉತ್ತರ-ಪುಸ್ತಿಕೆಯಲ್ಲಿ ನೀಡಿರುವ ನಿಗದಿತ ಸ್ಥಳದಲ್ಲಿ ಸ್ಪಷ್ಟವಾಗಿ ಬರೆಯಿರಿ.
   Candidates should write their Register Number on the Answer Booklet as printed in their admission ticket.
2. ಅಭ್ಯರ್ಥಿಗಳು ಹೆಚ್ಚುವರಿ ಉತ್ತರ ಹಾಳೆಗಳನ್ನು ಪಡೆದಲ್ಲಿ, ಉತ್ತರ ಹಾಳೆಗಳ ಮುಖಪುಟದ ಮೇಲಿನ ನಿಗದಿತ ಸ್ಥಳದಲ್ಲಿ ಮುಖ್ಯ ಉತ್ತರ-ಪುಸ್ತಿಕೆಯ ಕ್ರಮ ಸಂಖ್ಯೆಯನ್ನು ಬರೆಯತಕ್ಕದ್ದು.
   Candidates should write their Main Answer Booklet Number on the additional answer sheets in the space provided.
3. ಈ ಪ್ರಶ್ನೆಪತ್ರಿಕೆಯು ಆಂಗ್ಲ ಮತ್ತು ಕನ್ನಡ ಮಾಧ್ಯಮಗಳಲ್ಲಿ ಮುದ್ರಿತವಾಗಿದೆ. ಒಂದು ವೇಳೆ ಭಾಷಾಂತರಗೊಂಡ ಪ್ರಶ್ನೆಪತ್ರಿಕೆಯಲ್ಲಿ ವ್ಯತ್ಯಾಸ / ಸಂದೇಹವಿದ್ದಲ್ಲಿ ಆಂಗ್ಲ ಮಾಧ್ಯಮದಲ್ಲಿರುವ ಪ್ರಶ್ನೆಗಳು ಅಂತಿಮವೆಂದು ಪರಿಗಣಿಸತಕ್ಕದ್ದು.
   This Question Paper is printed in English and Kannada mediums. "In case of any discrepancies / doubts in the translated language, question in English medium is considered as valid and final.
4. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
   This Question Paper has been sealed by reverse jacket. You have to cut on the right side to open the Question Paper at the time of commencement of the examination. Check whether all the pages of the Question Paper are intact.
5. ಅಭ್ಯರ್ಥಿಗಳು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಇನ್ನಿತರೇ ಯಾವುದೇ ಪುಟಗಳಲ್ಲಿ ನೋಂದಣಿ ಸಂಖ್ಯೆ, ಗುರುತು ಹಾಗೂ ಚಿಹ್ನೆ ಇನ್ನಿತರೆ ಯಾವುದೇ ಮಾಹಿತಿಗಳನ್ನು ಬರೆಯಬಾರದು. ಒಂದು ವೇಳೆ, ಈ ಬಗೆಯ ಯಾವುದೇ ಮಾಹಿತಿಗಳನ್ನು ಉತ್ತರ-ಪುಸ್ತಿಕೆಯಲ್ಲಿ ಬರೆದ ಪಕ್ಷದಲ್ಲಿ ಅಂತಹ ಉತ್ತರ-ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
   Candidates should not write Register Number, mark, sign or any other information in the Answer Booklet except in the specified place. In case, it is found any information in the sheets of the answer scripts such answer scripts will not be considered for evaluation.
6. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಹಾಗೂ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಪರೀಕ್ಷಾ ನಿಯಮಾನುಸಾರ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ಉತ್ತರ-ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
   Candidate found to be indulging in malpractice during examination and violating examination instructions, action will be taken against such candidate as per the examination rules and his / her Answer Booklet will not be considered for evaluation.
7. ಉತ್ತರ ಬರೆಯಲು ಕಪ್ಪು / ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸತಕ್ಕದ್ದು.
   Use black / blue ball point pen only to write the answers.

ಇಲ್ಲಿಂದ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

institutes.aglasem.com
aglasem.com

(ಕನ್ನಡ ಮಾಧ್ಯಮ)

ಭಾಗ – I

ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ : 1 × 10 = 10

1. ಗಿಜು ಬಾಯಿ ಅವರು ಶಿಕ್ಷಣ ಶಾಸ್ತ್ರದ ಕುರಿತು ವಿಚಾರಗಳನ್ನು ವ್ಯಕ್ತಪಡಿಸಿರುವ ಕೃತಿ

(A) ಒಂದು ಗಿಳಿಯ ಕಥೆ (B) ದಿವ ಸ್ವಪ್ನ

(C) ಟೊಳ್ಳು ಗಟ್ಟಿ (D) ತೊತೋಚಾನ್

2. ಈ ಕೆಳಗಿನ ಅಂಶ ಚಿಂತನೆಯ ಭಾಗವಲ್ಲ

I. ಪ್ರಜ್ಞಾವಂತ ಪ್ರಕ್ರಿಯೆ

II. ಮುಕ್ತಾಂತ್ಯ ಪ್ರಶ್ನೆಗಳ ಸರಣಿ

III. ವಿಮರ್ಶಾತ್ಮಕ ನೋಟ

IV. ಸಕ್ರಿಯ ಪ್ರಕ್ರಿಯೆಗಳು

ಇವುಗಳಲ್ಲಿ :

(A) II ಮಾತ್ರ (B) II, III ಮತ್ತು IV

(C) II ಮತ್ತು III (D) I, III ಮತ್ತು IV

3. ಭಾರತವು ಮಕ್ಕಳಿಗೆ ಮೂಲಭೂತ ಹಕ್ಕು ನೀಡುವಲ್ಲಿ ತನ್ನ ಬದ್ಧತೆಯನ್ನು ತೋರಿಸುವ ಸೂಚ್ಯಾಂಕ

(A) ಶಿಶುಮರಣ ಏರಿಕೆ

(B) ಸಾಕ್ಷರತೆಯ ಗತಿ ನಿಧಾನ

(C) ಶಾಲೆ ಬಿಡುವ ಮಕ್ಕಳ ಸಂಖ್ಯೆ ಕಡಿಮೆ

(D) ಕಾನೂನು ಮತ್ತು ನೀತಿಗಳ ಬದ್ಧತೆ ಬಗ್ಗೆ ಅರಿವು ಮೂಡದಿರುವುದು

institutes.aglasem.com

aglasem.com

4. ಮಗುವಿಗೆ ಶಾಲಾ ಪರಿಸರದಲ್ಲಿ ಸಾಮಾಜೀಕರಣದ ಅತ್ಯಂತ ಪ್ರಮುಖವಾದ ಅಂಶ

(A) ಶಿಕ್ಷಕ – ಶಿಕ್ಷಕರ ಸಂಬಂಧ

(B) ಶಿಕ್ಷಕ – ವಿದ್ಯಾರ್ಥಿ ಸಂಬಂಧ

(C) ಮುಖ್ಯೋಪಾಧ್ಯಾಯ – ಶಿಕ್ಷಕ ಸಂಬಂಧ

(D) ಶಿಕ್ಷಕ – ಪಾಲಕ ಸಂಬಂಧ

5. ಒಂದು ಆಳತೆಯ ಎರಡು ಕಡ್ಡಿಗಳನ್ನು ಸಮಾಂತರದಲ್ಲಿ ಜೋಡಿಸಿ ನಂತರ ಒಂದು ಕಡ್ಡಿಯನ್ನು ಸ್ವಲ್ಪ ಮುಂದಕ್ಕೆ ಜರುಗಿಸಿದಾಗ ಅನನ್ಯ ಚಲಿಸಿದ ಕಡ್ಡಿಯು ಉದ್ದವಾಗಿದೆ ಎಂದು ಭಾವಿಸುತ್ತಾಳೆ. ಇದು ಅನನ್ಯಳ ಬೌದ್ಧಿಕ ವಿಕಾಸದ ಈ ಹಂತವನ್ನು ಸೂಚಿಸುತ್ತದೆ

(A) ಮೂರ್ತ ಕಾರ್ಯಗಳ ಹಂತ

(B) ಕಾರ್ಯಪೂರ್ವದ ಹಂತ

(C) ಸಂವೇದನಾಗತಿ ಹಂತ

(D) ಔಪಚಾರಿಕ ಕಾರ್ಯದ ಹಂತ

6. ಭ್ರಮೆಯ ತಾಂತ್ರಿಕ ಅರ್ಥ

(A) ಅಗಾಧವಾದ ಕಲ್ಪನೆ

(B) ಹಗಲುಗನಸು

(C) ಆವಿಷ್ಕರಿಸುವುದು

(D) ಸೃಜನಶೀಲತೆ

7. ಸಂರಚನಾವಾದದ ಸಿದ್ಧಾಂತದ ಅರಿವಿರುವ ಶಿಕ್ಷಕರು ಈ ಕೆಳಗಿನ ಅಂಶಕ್ಕೆ ಒತ್ತು ನೀಡುವುದಿಲ್ಲ

(A) ನಿಜಾಂಶವನ್ನು ಬಹುಮುಖ ರೂಪದಲ್ಲಿ ವ್ಯಕ್ತಪಡಿಸುವುದು

(B) ನೈಜ ಘಟನಾಧಾರಿತ ಸನ್ನಿವೇಶ ಒದಗಿಸುವುದು

(C) ಪ್ರತಿಫಲನ ಅಭ್ಯಾಸವನ್ನು ಪ್ರೋತ್ಸಾಹಿಸುವುದು

(D) ಜ್ಞಾನದ ನಕಲು ಮಾಡುವುದರೆಡೆಗೆ ಗಮನಹರಿಸುವುದು

institutes.aglasem.com
aglasem.com

8. ದರ್ಶನ ಸಂಗೀತ ಹಾಗೂ ಗಣಿತದಲ್ಲಿ ತುಂಬ ಬುದ್ಧಿವಂತ. ಈ ಮಗುವಿನ ಒಂದು ಬಹುಮುಖ್ಯವಾದ ಲಕ್ಷಣವೆಂದರೆ

(A) ಸೃಜನಾತ್ಮಕತೆ (B) ಗುಂಪುಗಾರಿಕೆ

(C) ನಾಯಕತ್ವ (D) ಸಹಭಾಗಿತ್ವ ಸಾಮರ್ಥ್ಯ

9. ನ್ಯೂನತೆಯುಳ್ಳ ಮಕ್ಕಳ ಶಿಕ್ಷಣವು ಪ್ರತ್ಯೇಕ ಶಾಲೆಯಲ್ಲಿ ನಡೆಯದೆ ಸಾಮಾನ್ಯ ಶಾಲೆಗಳಲ್ಲಿಯೇ ಶಿಕ್ಷಣ ಪಡೆಯಲು ಸಂವಿಧಾನ ಅವಕಾಶ ನೀಡಿದ ತಿದ್ದುಪಡಿ

(A) 25 ನೇ (1) (B) 24 ನೇ (2)

(C) 86 ನೇ (1) (D) 48 ನೇ (2)

10. ಭಾರತದ ಸಂವಿಧಾನದ ಅನುಚ್ಛೇದ 21(A) ಅಡಿಯಲ್ಲಿ ಪ್ರತಿ ಮಗುವಿಗೆ ಶಿಕ್ಷಣದ ಹಕ್ಕನ್ನು ನೀಡಿದ ಕಾಯ್ದೆಯು ಒತ್ತು ನೀಡಿದ ಅಂಶ

(A) ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ಕಡಿಮೆ ಮಾಡುವುದು

(B) ದಾಖಲಾತಿ ಸಾರ್ವತ್ರೀಕರಣ

(C) ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು

(D) ಸರ್ಕಾರದ ಧನಸಹಾಯದಿಂದಲೇ ಶಿಕ್ಷಣ ಸಂಸ್ಥೆಗಳ ನಿರ್ವಹಣೆ

ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ: **2 × 5 = 10**

11. ನೀವು ವೃತ್ತಿಪರ ಶಿಕ್ಷಕರಾಗಲು ಯಾವ ಕ್ರಮಗಳನ್ನು ಕೈಗೊಳ್ಳುವಿರಿ ?

12. ಸಾಮಾಜೀಕರಣದ ಸಂದರ್ಭದಲ್ಲಿ ಸಮವಯಸ್ಕರ ಸಮೂಹದ ಪಾತ್ರವೇನು ?

13. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF) 2005 ನ ಸೂಕ್ತ ನಾಲ್ಕು ಶೈಕ್ಷಣಿಕ ಗುರಿಗಳನ್ನು ಪಟ್ಟಿಮಾಡಿ.

institutes.aglasem.com

aglasem.com

14. 'ಬಾಲ್ಯಾವಸ್ಥೆಯು ಜಗಳಗಂಟಿತನದ ವಯಸ್ಸು' ಎಂದು ಏಕೆ ಕರೆಯುವರು ? ಸಂಕ್ಷಿಪ್ತವಾಗಿ ವಿವರಿಸಿ.

15. ಶಿಕ್ಷಕರು ತರಗತಿಯಲ್ಲಿ ಕಲಿಕೆಯನ್ನು ಹೇಗೆ ಮೌಲ್ಯಂಕನ ಮಾಡಬಹುದು ?

16. ದೃಷ್ಟಿದೋಷವಿರುವ ಮಗುವಿಗೆ ತಮ್ಮ ತರಗತಿಯಲ್ಲಿ ಹೇಗೆ ಕಲಿಕಾ ಪರಿಸರವನ್ನು ಸೃಷ್ಟಿಸುವಿರಿ ?

17. 'ಸರ್ವ ಶಿಕ್ಷಣ ಅಭಿಯಾನ'ದ ನಾಲ್ಕು ಉದ್ದೇಶಗಳನ್ನು ಪಟ್ಟಿಮಾಡಿ.

18. ವ್ಯಕ್ತಿಗತ ಅನನ್ಯತೆಯ ವಿಕಾಸವು ಹೇಗೆ ಗತಿಶೀಲ ಪ್ರಕ್ರಿಯೆಯಾಗಿದೆ ?

ಭಾಗ – III

ಈ ಕೆಳಗಿನ ಪ್ರತಿ ಪ್ರಶ್ನೆಗೂ (a) ಅಥವಾ (b) ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ.

ಪ್ರತಿಯೊಂದು ಉತ್ತರವು ಒಂದು ಪುಟಕ್ಕೆ ಮೀರದಂತೆ ಉತ್ತರಿಸಿ : **5 × 8 = 40**

19. a) ಬಾಲ್ಯಾವಸ್ಥೆಯ ಐದು ಗುಣಲಕ್ಷಣಗಳನ್ನು ಪಟ್ಟಿಮಾಡಿ ವಿವರಿಸಿ.

ಅಥವಾ

b) ತಾರುಣ್ಯಾವಸ್ಥೆಯ ಐದು ಗುಣಲಕ್ಷಣಗಳನ್ನು ಪಟ್ಟಿಮಾಡಿ ವಿವರಿಸಿ.

20. a) ಕಲಿಕೆಯನ್ನು ಮೂಲಭೂತವಾಗಿ ಸಾಮಾಜಿಕ ಪ್ರಕ್ರಿಯೆಯೆಂದು ಏಕೆ ಪರಿಗಣಿಸಲಾಗಿದೆ ?

ಅಥವಾ

b) ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಸಮುದಾಯ ಹಾಗೂ ಸಮೂಹ ಮಾಧ್ಯಮಗಳ ಪಾತ್ರವನ್ನು ವಿವರಿಸಿ.

21. a) ಯಾವುದಾದರೂ ಐದು ಮೂಲಭೂತ ಕರ್ತವ್ಯಗಳನ್ನು ನಿಮ್ಮ ತರಗತಿಯಲ್ಲಿ ಹೇಗೆ ಅನುಷ್ಠಾನಗೊಳಿಸುವಿರಿ ?

ಅಥವಾ

b) ಮೀಸಲಾತಿ ನೀತಿಯ ಪ್ರಯೋಜನಗಳನ್ನು ನಿಮ್ಮ ತರಗತಿಯ ವಿದ್ಯಾರ್ಥಿಗಳಿಗೆ ಹೇಗೆ ತಲುಪಿಸುವಿರಿ ?

institutes.aglasem.com
aglasem.com

22. a) "ಒಳಗೊಳ್ಳುವ ಪ್ರಕ್ರಿಯೆಗೆ ಋಣಾತ್ಮಕ ಮನೋಭಾವ ಒಂದು ದೊಡ್ಡ ಅಡೆತಡೆ" ಈ ಹೇಳಿಕೆಯನ್ನು ವಿಶ್ಲೇಷಿಸಿ.

ಅಥವಾ

b) "ಒಂದು ತರಗತಿಯಲ್ಲಿ ವೈವಿಧ್ಯತೆ ಸಮಸ್ಯೆ ಎಂದು ಪರಿಗಣಿಸುವ ಬದಲಿಗೆ ಸಂಪನ್ಮೂಲವೆಂದು ಬಳಕೆಯಾಗಬೇಕು." ಈ ಹೇಳಿಕೆಯನ್ನು ವಿಶ್ಲೇಷಿಸಿ.

23. a) ಆಟದ ಐದು ಕಾರ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

ಅಥವಾ

b) ಕಲಿಕೆಯ ನಾಲ್ಕು ಗುಣಲಕ್ಷಣಗಳನ್ನು ಪಟ್ಟಿಮಾಡಿ ಸಂಕ್ಷಿಪ್ತವಾಗಿ ಒಂದನ್ನು ವಿವರಿಸಿ.

24. a) ಸಾಮಾಜೀಕರಣದ ಸಂದರ್ಭಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಭಿನ್ನತೆಗಳ ಪಾತ್ರವನ್ನು ಸಂಕ್ಷಿಪ್ತವಾಗಿ ವಿವರಿಸಿ.

ಅಥವಾ

b) ಶೈಕ್ಷಣಿಕ ಸಮಾಜಶಾಸ್ತ್ರದ ವ್ಯಾಪ್ತಿಯು ಒಳಗೊಂಡಿರುವ ಐದು ಅಂಶಗಳನ್ನು ವಿವರಿಸಿ.

25. a) ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಆಟದ ಸೂಕ್ತ ಐದು ಶೈಕ್ಷಣಿಕ ನಿಹಿತಾರ್ಥಗಳನ್ನು ಪಟ್ಟಿಮಾಡಿ.

ಅಥವಾ

b) ಪಿಯಾಜೆ ಸಿದ್ಧಾಂತದ ಕಾರ್ಯಪೂರ್ವ ಹಾಗೂ ಔಪಚಾರಿಕ ಕಾರ್ಯದ ಹಂತಗಳಿಗೆ ಶೈಕ್ಷಣಿಕ ನಿಹಿತಾರ್ಥಗಳನ್ನು ತಿಳಿಸಿ.

26. a) ಪ್ರತಿಭಾನ್ವಿತ ಮಕ್ಕಳಿಗೆ ಕಲಿಕೆಯನ್ನು ಹೆಚ್ಚು ಆಸಕ್ತಿದಾಯಕ ಮತ್ತು ಸಮಂಜಸ ಮಾಡಲು ತೆಗೆದುಕೊಳ್ಳುವ ಐದು ಕ್ರಮಗಳನ್ನು ತಿಳಿಸಿ.

ಅಥವಾ

b) ವಿವಿಧ ಹಿನ್ನೆಲೆಗಳಿಂದ ಬಂದಂತಹ ಮಕ್ಕಳಿಗೆ ಅವಕಾಶಗಳನ್ನು ಕಲ್ಪಿಸಲು ನೀವು ತೆಗೆದುಕೊಳ್ಳುವ ಐದು ಕ್ರಮಗಳನ್ನು ತಿಳಿಸಿ.

institutes.aglasem.com

aglasem.com

(English Medium)

PART – I

Four choices have been given for each of the following questions. Choose the most appropriate answer and write in the answer-book. Each question has one mark. All the questions are compulsory.

1 × 10 = 10

1. The book in which Gijubhai Badheka expressed his ideas on Pedagogy is

   (A) A Parrot's Tale (B) Diva Swapna

   (C) Tollu Gatti (D) Totochan.

2. Which of the following aspects is/are not a part of reflection ?

   I. Conscious process

   II. Series of closed ended questions

   III. Critical look

   IV. Active process.

   Of these :

   (A) Only II (B) II, III and IV

   (C) II and III (D) I, III and IV.

3. The indicator that shows commitment of India towards ensuring the basic rights of children is

   (A) Infant mortality rates are high

   (B) Literacy rates are down

   (C) School dropout rate has decreased

   (D) No awareness about legal and policy commitment.

institutes.aglasem.com

aglasem.com

4. The most important factor of socialization in school environment is the

   (A) Teacher-Teacher relationship

   (B) Teacher-Student relationship

   (C) Headmaster-Teacher relationship

   (D) Teacher-Parent relationship.

5. When two sticks with same measurement are laid parallel to each other and then one of them is moved a little, Ananya thinks that moved stick is now longer than the other. This indicates Ananya is in the following cognitive development stage :

   (A) Concrete operations stage (B) Pre-operational stage

   (C) Sensori-motor stage (D) Formal operational stage.

6. Technically fantasy means

   (A) tremendous imagination (B) day dreaming

   (C) invention (D) creativity.

7. A teacher who understands constructivist ideology will not stress the following aspect :

   (A) Providing multiple representation of reality

   (B) Providing natural complexity of situations

   (C) Fostering reflective practice

   (D) Focusing on knowledge reproduction.

institutes.aglasem.com

aglasem.com

8. Darshan exhibits tremendous intelligence in music and mathematics. One of the important characteristics of this child is

   (A) Creativity (B) Groupism

   (C) Leadership (D) Collaborative ability.

9. The Amendment of the constitution that provided opportunity for disabled children not to have segregated education in a separate school but to have education in regular schools is

   (A) 25th (1) (B) 24th (2)

   (C) 86th (1) (D) 48th (2).

10. The aspect that was stressed to provide Right to Education for every child under the Article 21(A) is

   (A) Reducing school dropout rate

   (B) Universalization of enrolment

   (C) Providing free and compulsory education

   (D) Management of educational institutions through government aids.

PART – II

Answer any *five* of the following questions, each answer not exceeding *half a* page. **2 × 5 = 10**

11. What measures would you take up to become a professional teacher ?

12. What is the role of peer group in the context of socialization ?

13. List out four suitable educational aims of NCF 2005 (National Curriculum Framework-2005).

14. Why is childhood called a quarrelsome age ? Briefly explain.

institutes.aglasem.com

aglasem.com

15. How can teachers assess classroom learning ?

16. How do you create learning environment in your classroom for a visually disabled child ?

17. List out four objectives of Sarva Shiksha Abhiyana.

18. How is the development of personal identity, a dynamic process ?

PART – III

There is an alternate question for each of the following. Answer either 'a' or 'b' of them, each answer not exceeding *one* page. 5 × 8 = 40

19. (a) List out five characteristics of childhood and explain.

OR

(b) List out five characteristics of adolescence and explain.

20. (a) Why is learning considered fundamentally as a social process ?

OR

(b) Explain the role of community and mass media in socialization process.

21. (a) How do you implement any *five* fundamental duties in your classroom ?

OR

(b) How do you ensure the benefits of reservation policy for the students of your classroom ?

22. (a) "Negative attitude is the biggest barrier to inclusive process." Analyse the statement.

OR

(b) "Diversity in a classroom should be considered as a resource rather than a problem." Analyse the statement.

institutes.aglasem.com

aglasem.com

23. (a) Briefly explain the *five* functions of play.

OR

(b) List out *four* characteristics of learning and briefly explain any *one*.

24. (a) Explain the role of social and cultural differences in socialization.

OR

(b) Explain *five* aspects encompassed under the scope of sociology of education.

25. (a) List out *five* suitable educational implications of play in teaching-learning process.

OR

(b) State educational implications of pre-operational stage and formal operational stage of Piaget's theory.

26. (a) Mention *five* measures that you would take up to make learning interesting and appropriate for gifted children.

OR

(b) Mention *five* measures that you would take up to create opportunities for children from diverse backgrounds.

institutes.aglasem.com

aglasem.com

DO NOT WRITE ANYTHING HERE

institutes.aglasem.com

aglasem.com

Answer Key

institutes.aglasem.com

aglasem.com

ಮಾದರಿ ಉತ್ತರಗಳು
MODEL ANSWERS

ಸಂಕೇತ ಸಂಖ್ಯೆ : **302-EK**

Code No. : 302-EK

ಡಿ.ಎಲ್.ಇಡಿ. ಪ್ರಥಮ ವರ್ಷ

D.El.Ed. FIRST YEAR

ಶಿಕ್ಷಣ

EDUCATION

ಮೂಲ ಪರಿಕಲ್ಪನೆಗಳ ಪರಿಚಯ
INTRODUCTION TO BASIC CONCEPTS

(ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ)

(Kannada & English Medium)

ದಿನಾಂಕ : 05. 07. 2022] [ಗರಿಷ್ಠ ಅಂಕಗಳು : 60

Date : 05. 07. 2022] [Max. Marks : 60

(ಕನ್ನಡ ಮಾಧ್ಯಮ)

ಭಾಗ – I

ಬಹು-ಆಯ್ಕೆಯ ಉತ್ತರಗಳು : (ಪ್ರತಿಯೊಂದು ಸರಿ ಉತ್ತರಕ್ಕೆ ಒಂದೊಂದು ಅಂಕದಂತೆ)

1 × 10 = 10

1. (B) ದಿವ ಸ್ವಪ್ನ
2. (A) II ಮಾತ್ರ
3. (C) ಶಾಲೆ ಬಿಡುವ ಮಕ್ಕಳ ಸಂಖ್ಯೆ ಕಡಿಮೆ
4. (B) ಶಿಕ್ಷಕ – ವಿದ್ಯಾರ್ಥಿ ಸಂಬಂಧ
5. (A) ಮೂರ್ತ ಕಾರ್ಯಗಳ ಹಂತ
6. (B) ಹಗಲುಗನಸು
7. (D) ಜ್ಞಾನದ ನಕಲು ಮಾಡುವುದರೆಡೆಗೆ ಗಮನಹರಿಸುವುದು
8. (A) ಸೃಜನಾತ್ಮಕತೆ
9. (C) 86 ನೇ (1)
10. (C) ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು

institutes.aglasem.com

aglasem.com

ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ: **2 × 5 = 10**

11.
- ಮಕ್ಕಳಲ್ಲಿ ಆಸಕ್ತಿ ಇದ್ದು ಅವರೊಂದಿಗಿರುವ ಇಚ್ಛೆ. ಮಕ್ಕಳನ್ನು ಅವರ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವ್ಯಾಪ್ತಿಯೊಳಗೆ ಅರ್ಥಮಾಡಿಕೊಳ್ಳುವುದು. ಅದರ ಅವಶ್ಯಕತೆಗಳ ಹಾಗೂ ಸಮಸ್ಯೆಗಳಿಗೆ ಸೂಕ್ಷ್ಮತೆ ಬೆಳೆಸಿಕೊಳ್ಳುವುದು, ಎಲ್ಲಾ ಮಕ್ಕಳನ್ನು ಸಮಾನವಾಗಿ ಕಾಣುವುದು.
- ಪಠ್ಯಕ್ರಮ ಹಾಗೂ ಪಠ್ಯಪುಸ್ತಕಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ, ಸ್ಥಳೀಯ ಅವಶ್ಯಕತೆಗಳಿಗೆ ಪಠ್ಯಕ್ರಮವನ್ನು ಹೊಂದಿಸುವುದು.
- ಮಕ್ಕಳ ಜ್ಞಾನವನ್ನು ಸಹಜ ಅರ್ಥ ರಚನಾ ಸಾಮರ್ಥ್ಯವನ್ನು ಹೆಚ್ಚಿಸಿ.
- ಜ್ಞಾನವು ಪಠ್ಯಕ್ರಮದಲ್ಲಿ ಅಳವಡಿಸಲ್ಪಟ್ಟು ಸ್ವೀಕರಿಸುವಂತಹದು ಮತ್ತು ನೀಡುವಂತಹುದು.
- ಕಲಿಯುವವರ ಕೇಂದ್ರಿತ ಚಟುವಟಿಕೆ ಆಧಾರಿತ ಅನುಭವಗಳು, ಆಟ, ಯೋಜನೆಗಳು, ಸಂವಾದ.
- ಶಾಲಾ ಶೈಕ್ಷಣಿಕ ಕಲಿಕೆ, ವಿದ್ಯಾರ್ಥಿಗಳ ಸಾಮಾಜಿಕ ಹಾಗೂ ವೈಯಕ್ತಿಕ ಸ್ಪಂದಿಸುವುದು.

(ಸೂಕ್ತವಾದ ನಾಲ್ಕು ಅಂಶಗಳು) ½ × 4 = 2

12.
- I ನೇ ಅಥವಾ II ನೇ ತರಗತಿಯಲ್ಲಿರುವಾಗಲೇ ಮಕ್ಕಳು ಸಾಮಾಜಿಕ ಗುಂಪುಗಳನ್ನು ಮಾಡಿಕೊಳ್ಳುವರು.
- ಪಾಲಕರು ಮತ್ತು ಶಾಲೆಯ ಒತ್ತಾಯಪೂರಕ ವರ್ತನೆಗಳನ್ನು ಸಮವಯಸ್ಕರರು ಪುನರ್‌ಬಲನಗೊಳಿಸುವರು.
- ಸಮವಯಸ್ಕರರು ಕಲಿಕಾರ್ಥಿಗಳ ಮೇಲೆ ಶಾಲೆಯ ಒಳಗೂ ಮತ್ತು ಶಾಲೆಯ ಹೊರಗೂ ಸಹ ಪ್ರಭಾವವನ್ನು ಬೀರುತ್ತಾರೆ.
- ಯಾವುದೇ ಪಾಲಕರೂ ಸಹಾ ತಮ್ಮ ಮಕ್ಕಳು ಕೆಟ್ಟ ಸಮವಯಸ್ಕರ ಸಮೂಹದ ಪ್ರಭಾವಕ್ಕೆ ಒಳಗಾಗುವುದನ್ನು ಬಯಸುವುದಿಲ್ಲ.

(ಸೂಕ್ತವಾದ ನಾಲ್ಕು ಅಂಶಗಳು) ½ × 4 = 2

13.
- ಪ್ರಜಾಪ್ರಭುತ್ವಕ್ಕೆ ಬದ್ಧತೆಯನ್ನು, ಸಮಾನತೆ, ನ್ಯಾಯ ಸ್ವಾತಂತ್ರ್ಯ, ಜಾತ್ಯಾತೀತತೆ, ಹಕ್ಕುಗಳನ್ನು ಗೌರವಿಸುವ ಮೌಲ್ಯಗಳನ್ನು ಬೆಳೆಸುವುದು.
- ಸ್ವತಂತ್ರ ಆಲೋಚನೆ ಮತ್ತು ಕ್ರಿಯೆ ಹಾಗೂ ಜಾಗರೂಕತೆಯಿಂದ ಪರಿಶೀಲಿಸಲ್ಪಟ್ಟ ಸಾಮರ್ಥ್ಯವನ್ನು ಪೋಷಿಸುವುದು.
- ಇತರರ ಭಾವೆಗಳಿಗೆ ಸೂಕ್ಷ್ಮತೆಯಿಂದ ಸ್ಪಂದಿಸುವುದನ್ನು ಪೋಷಿಸುವುದು.
- ಹೊಸ ಸನ್ನಿವೇಶಗಳಿಗೆ ನಮ್ಯವೂ, ಸೃಜನಾತ್ಮಕವೂ ಅನುಕ್ರಿಯೆ ತೋರುವ ಅಭ್ಯಾಸ ಬೆಳೆಸುವುದು.

(ಸೂಕ್ತವಾದ ನಾಲ್ಕು ಅಂಶಗಳು) ½ × 4 = 2

institutes.aglasem.com

aglasem.com

14. ಈ ವಯಸ್ಸಿನ ಮಕ್ಕಳು ಹೆಚ್ಚಾಗಿ ತನ್ನ ಒಡಹುಟ್ಟಿದವರು, ವಿಶೇಷವಾಗಿ ವಿರುದ್ಧ ಲಿಂಗದವರ ಜೊತೆ ಜಗಳವಾಡುತ್ತಾರೆ, ಕೆಣಕುವುದು, ಅಡ್ಡ ಹೆಸರಿನಿಂದ ಕೂಗುವುದು, ಹಂಗಿಸುವುದು, ಪೀಡಿಸುವುದು, ಕುಸ್ತಿ ಮಾಡುವುದು, ವಾಗ್ವಾದ ಮಾಡುವುದು ಆದ್ದರಿಂದ ಪಾಲಕರು ಈ ಹಂತವನ್ನು ಜಗಳಗಂಟಿತನದ ವಯಸ್ಸು ಎಂದು ಭಾವಿಸುವರು.

15. • ಕಲಿಕೆಯ ಮೌಲ್ಯಾಂಕನ ಮಾಡುವುದು ಒಂದು ಪ್ರಾಮುಖ್ಯವಾದ ಚಟುವಟಿಕೆ.
    • ಕಲಿತಿರುವುದನ್ನೆಲ್ಲ ಮೌಲ್ಯಾಂಕನಕ್ಕೆ ಒಳಪಡಿಸುವುದೇ ಕಲಿಕಾ ನಂತರ ಮೌಲ್ಯಾಂಕನ.
    • ಮೌಲ್ಯಾಂಕನವೇ ಒಂದು ಕಲಿಕಾ ಚಟುವಟಿಕೆಯಾದರೆ ಅದನ್ನೇ ಕಲಿಕಾ ಮೌಲ್ಯಾಂಕನ ಎನ್ನುವರು.
    • ಕಲಿಕೆಯ ಮೌಲ್ಯಾಂಕನದ ಬಗ್ಗೆ ಮಾತನಾಡುವಾಗ ಅದನ್ನು ಮೌಲ್ಯಂಕನದ ಸಾಧನೆಗಳು ಮತ್ತು ತಂತ್ರಗಳು ಎಂದು ಭಾವಿಸಿದ್ದೇವೆ. (ಸೂಕ್ತವಾದ ಎರಡು ಅಂಶಗಳು) $1 \times 2 = 2$

16. • ದೃಷ್ಟಿದೋಷವಿರುವ ಮಗುವನ್ನು ಸಾಮಾನ್ಯ ಶಾಲೆಗಳಿಗೆ ಸೇರಿಸುವುದೊಂದೇ ಅಲ್ಲ ಆದರೆ ಸುಲಭ ಲಭ್ಯತೆಯನ್ನು ಖಚಿತಪಡಿಸುವುದು.
    • ಸಹಾಯಕ ಸಾದನಗಳು ಮತ್ತು ಉಪಕರಣಗಳನ್ನು ಒದಗಿಸುವುದು.
    • ಬ್ರೈಲ್ ಕಲಿಕೆ ಪರ್ಯಾಯ ಸಂವಹನ ವ್ಯವಸ್ಥೆ ಸಹಪಾಠಿಗಳ ಬೆಂಬಲವನ್ನು ಅನುಕೂಲಿಸುವುದು. ವಿಶ್ವಾಸನೀಯ ಸಲಹೆ ನೀಡುವುದು.

(ಸೂಕ್ತವಾದ ನಾಲ್ಕು ಅಂಶಗಳು) $\frac{1}{2} \times 4 = 2$

17. 'ಸರ್ವ ಶಿಕ್ಷಣ ಅಭಿಯಾನ'ದ ಉದ್ದೇಶಗಳನ್ನು ಪಟ್ಟಿಮಾಡಿ :
    • 2003 ರ ಹೊತ್ತಿಗೆ ಎಲ್ಲಾ ಮಕ್ಕಳು ಶಾಲೆಯ ಒಳಗೆ ಇರುವಂತೆ ಮಾಡಲು ಶಿಕ್ಷಣದ ಹೊಣೆಗಾರಿಕೆ ಕೇಂದ್ರಗಳು, ಪರ್ಯಾಯ ಶಾಲೆಗಳು ಹಾಗೂ 'ಮರಳಿ ಬಾ ಶಾಲೆಗೆ' ಶಿಬಿರಗಳು.
    • 2007 ರ ಹೊತ್ತಿಗೆ ಎಲ್ಲಾ ಮಕ್ಕಳು ಐದು ವರ್ಷ ಕಾಲಾವಧಿಯ ಪ್ರಾಥಮಿಕ ಶಿಕ್ಷಣವನ್ನು ಪಡೆಯಬೇಕು.
    • 2010 ರ ಹೊತ್ತಿಗೆ ಎಲ್ಲಾ ಮಕ್ಕಳು ಎಂಟು ವರ್ಷ ಕಾಲಾವಧಿಯ ಪ್ರಾಥಮಿಕ ಶಿಕ್ಷಣವನ್ನು ಪಡೆಯಬೇಕು.
    • ಸಾರ್ವತ್ರಿಕವಾಗಿ 2010 ರ ಭಾಗವಾಗಿ ಎಲ್ಲಾ ಮಕ್ಕಳು ಶಾಲೆಯಲ್ಲಿ ಉಳಿಯುವಂತೆ ಮಾಡುವುದು.

(ಸೂಕ್ತವಾದ ನಾಲ್ಕು ಅಂಶಗಳು) $\frac{1}{2} \times 4 = 2$

18. ವ್ಯಕ್ತಿಗತ ಅನನ್ಯತೆಯ ವಿಕಾಸವು ಸಹಾ ಗತಿಶೀಲ ಪ್ರಕ್ರಿಯೆಯಾಗಿದ್ದು :
    • ಮಗುವಿನ ವಿವಿಧ ಚಟುವಟಿಕೆಗಳು ಮತ್ತು ದೈನಂದಿನ ಸಂದರ್ಭಗಳಲ್ಲಿ ಮಗುವು ಮನೆಯ , ಸಮುದಾಯ ಮತ್ತು ಶಾಲಾಪೂರ್ವದಲ್ಲಿ ಹೊಂದಿರುವ ಸಂಬಂಧಗಳನ್ನು ಹುದುಗಿಸುವುದೇ ಆಗಿದೆ.

institutes.aglasem.com
aglasem.com

- ಮಗುವು ತನ್ನ ಪಾಲಕರು, ಶಿಕ್ಷಕರು, ಸಮವಯಸ್ಕರು ಇತರರೊಂದಿಗೆ ಅನ್ಯೋನ್ಯಕ್ರಿಯೆಗಳ ಮುಖಾಂತರ ನಿರ್ಮಿಸುವುದು.
- ಗತಿಶೀಲ ಪ್ರಕ್ರಿಯೆಯೂ ಹಂಚಿಕೊಳ್ಳುವ ಚಟುವಟಿಕೆಗಳಲ್ಲಿರುವ ಅನುಕರಣೆ ಮತ್ತು ಗುರುತಿಸುವುದೇ ಆಗಿದೆ.
- ಅಶಾಬ್ದಿಕ ಸಂವಹನ, ಸಂಭಾಷಣೆ, ತದನಂತರ ಭಾಷಾ, ವಿದ್ಯುದ್ಮಾನ ಮಾಧ್ಯಮಗಳು ಸಂಪನ್ಮೂಲವಾಗಿ ಸಾಪೇಕ್ಷವಾಗಿ ನಿರ್ಮಿಸಲು ಸಹಾಯಕವಾಗಿದೆ.

(ಸೂಕ್ತವಾದ ನಾಲ್ಕು ಅಂಶಗಳು) $\frac{1}{2} \times 4 = 2$

ಭಾಗ – III

ಈ ಕೆಳಗಿನ ಪ್ರತಿ ಪ್ರಶ್ನೆಗೂ (a) ಅಥವಾ (b) ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟಕ್ಕೆ ಮೀರದಂತೆ ಉತ್ತರಿಸಿ : **5 × 8 = 40**

19. (a) ಬಾಲ್ಯಾವಸ್ಥೆಯ ಐದು ಗುಣಲಕ್ಷಣಗಳನ್ನು ಪಟ್ಟಿಮಾಡಿ :

1. ***ನಿರ್ಲಕ್ಷ್ಯತನ ಅವಧಿ :*** ಮಕ್ಕಳು ತನ್ನ ಸುತ್ತಮುತ್ತಲಿನಲ್ಲಿ ಜರುಗುವ ಅನೇಕ ವಿಷಯ ಅಥವಾ ಸಂಗತಿಗಳ ಬಗ್ಗೆ ಯಾವುದೇ ಕಾರ್ಯದಲ್ಲಿಯೂ ಸಹಜವಾಬ್ದಾರಿತನವನ್ನು ಹಾಗೂ ಲಕ್ಷ್ಯವನ್ನು ವಹಿಸುವುದಿಲ್ಲ.
   - ಸಾಮಾನ್ಯವಾಗಿ, ಸಂದರ್ಭಗಳನ್ನು ಹಗುರವಾಗಿ ಪರಿಗಣಿಸಿ, ವ್ಯವಹರಿಸುವುದೇ ಆಗಿದೆ.
2. ***ಪಾಲಕರಿಗೆ ತ್ರಾಸದಾಯಕ ವಯಸ್ಸು :*** ಪಾಲಕರು ಮಕ್ಕಳನ್ನು ಶಿಸ್ತಿನಲ್ಲಿ ಬೆಳೆಸಲು ಪ್ರಯತ್ನಿಸುತ್ತಾರೆ.
   - ಮಕ್ಕಳಿಗೆ ಶಿಸ್ತು ಇಷ್ಟವಿಲ್ಲ ಈ ಅವಧಿಯಲ್ಲಿ ನಿರ್ಲಕ್ಷ್ಯತನವು ಹೆಚ್ಚಾಗಿರುವುದರಿಂದ ಪಾಲಕರಿಗೆ ಆತಂಕ.
3. ***ಜಗಳಗಂಟಿತನ ವಯಸ್ಸು :*** ಈ ವಯಸ್ಸಿನ ಮಕ್ಕಳು ಹೆಚ್ಚಾಗಿ ತನ್ನ ಒಡಹುಟ್ಟಿದವರು.
   - ಪಾಲಕರು ಈ ಹಂತವನ್ನು ಜಗಳಗಂಟಿತನದ ವಯಸ್ಸು ಎಂದು ಭಾವಿಸುತ್ತಾರೆ.
4. ಪ್ರಾಥಮಿಕ ಶಾಲಾ ವಯಸ್ಸು
5. ಸಾಧನೆಯ ಸಂದಿಗ್ಧ ಅವಧಿ
6. ಗುಂಪುಗಾರಿಕೆ
7. ಬದ್ಧತೆಯ ವಯಸ್ಸು
8. ಸೃಜನಶೀಲತೆಯ ವಯಸ್ಸು
9. ಆಟದ ವಯಸ್ಸು

(ಇವುಗಳಲ್ಲಿ ಯಾವುದಾದರೂ ಐದನ್ನು ಸಂಕ್ಷಿಪ್ತವಾಗಿ ವಿವರಿಸಿ) $1 \times 5 = 5$

ಅಥವಾ

institutes.aglasem.com

aglasem.com

(b) ತಾರುಣ್ಯಾವಸ್ಥೆಯ ಐದು ಗುಣಲಕ್ಷಣಗಳನ್ನು ಪಟ್ಟಿಮಾಡಿ :

- ಬದಲಾವಣೆಯ ಅವಧಿ
- ಸಮಸ್ಯೆಯ ಅವಧಿ
- ಅಸ್ತಿತ್ವದ ಹುಡುಕಾಟದ ಅವಧಿ
- ಭೀತಿಯ ಅವಧಿ
- ಆದರ್ಶವಾದದ ಅವಧಿ
- ವಯಸ್ಕರ ಹೊಸ್ತಿಲು

(ಇವುಗಳಲ್ಲಿ ಯಾವುದಾದರೂ ಐದನ್ನು ಸಂಕ್ಷಿಪ್ತವಾಗಿ ವಿವರಿಸಿ) $1 \times 5 = 5$

20. (a) ಮನುಷ್ಯನು ಮೂಲಭೂತವಾಗಿ ಸಾಮಾಜಿಕ ಜೀವಿಯಾಗಿದ್ದು ಅವನು ಕಲಿತಿರುವುದೆಲ್ಲಾ ಸಾಮಾಜಿಕ ಸಂದರ್ಭಗಳಿಂದಲೇ

- ಸಮಾಜಶಾಸ್ತ್ರ ಮತ್ತು ಶಿಕ್ಷಣದ ನಡುವಿನ ಸಂಬಂಧವು ಸದಾ ಚರ್ಚೆಯ ವಿಷಯವಾಗಿದೆ.
- ಸಮಾಜದ ಸಮತೋಲನವನ್ನು ಉತ್ತೇಜಿಸುವುದು ಪ್ರಚಲಿತದಲ್ಲಿರುವ ಸಮಾನತೆ / ಅಸಮಾತೆಯನ್ನು ಯಥಾಸ್ಥಿತಿಯಲ್ಲಿ ಕಾಪಾಡುವುದು.
- ಸಹ ಶಿಕ್ಷಣವು ಒಂದು ಸಾಮಾಜಿಕ ಪ್ರಯತ್ನ ಮತ್ತು ನಿರ್ದೇಶನವನ್ನು ಸಹಾ ನೀಡುತ್ತದೆ.
- ಕಲಿಕೆಯ ಫಲಗಳಲ್ಲಿ ಮಹತ್ತರ ಪಾತ್ರವನ್ನು ಹೊಂದಿದೆ ಹಾಗಾಗಿ ನಿಮಗೆ ಮತ್ತು ನೇರ ಸಂಬಂಧ ಹೊಂದಿರುವ ಶೈಕ್ಷಣಿಕ ಸಂಸ್ಥೆಗಳಿಗೆ ಆಸಕ್ತಿದಾಯಕ ವಿಷಯವಾಗಿದೆ.
- ಗ್ರಂಥಾಲಯದಲ್ಲಿ ಕುಳಿತು ಕಾದಂಬರಿಯನ್ನು ಓದುತ್ತಿರುವಾಗ, ನಾವು ಪುಸ್ತಕದಲ್ಲಿರುವ ಪಾತ್ರಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳೊಂದಿಗೆ ಅನ್ಯೋನ್ಯಕ್ರಿಯೆ ಮಾಡುತ್ತೇವೆ.
- ತಮ್ಮ ಜ್ಞಾನವನ್ನು ತಾವೇ ಸ್ವಯಂ ನಿರ್ಮಿಸಿಕೊಳ್ಳುತ್ತಾರೆ ಎಂಬುದನ್ನು ಧೃಡಪಡಿಸಿವೆ.

$1 \times 5 = 5$

ಅಥವಾ

(b) ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಸಮುದಾಯ ಹಾಗೂ ಸಮೂಹ ಮಾಧ್ಯಮಗಳ ಪಾತ್ರ :

- ಸಾಮಾಜೀಕರಣವು ಪ್ರಾಥಮಿಕ ಕುಟುಂಬದಿಂದ ಪ್ರಭಾವಿತವಾಗಿದ್ದು. ಅದರ ಮೂಲಕ ಮಕ್ಕಳು ಮೊದಲು ಸಮುದಾಯದ ಆದರ್ಶಗಳನ್ನು ಕಲಿಯುತ್ತಾರೆ.
- ಸಮುದಾಯವು ಕುಟುಂಬಗಳ ಸಮೂಹಗಳಾಗಿದ್ದು, ನಿರ್ದಿಷ್ಟವಾದ ಸಾಮಾನ್ಯ ಸಂಪ್ರದಾಯ, ಆಚರಣೆಗಳು, ವಾಡಿಕೆಗಳು, ಜನಪದ ಪದ್ಧತಿಗಳು, ಆದರ್ಶಗಳು ಮತ್ತು ಸಂಸ್ಕೃತಿಯನ್ನು ಹಂಚಿಕೊಳ್ಳುತ್ತವೆ.

institutes.aglasem.com
aglasem.com

- ಮಕ್ಕಳು ಸಮುದಾಯಾಧಾರಿತ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಸ್ವಯಂ ನಿಯಂತ್ರಣ, ಸಾಮಾಜಿಕ ಕೌಶಲ್ಯಗಳು ಮತ್ತು ಸಮಾಜದ ಮೌಲ್ಯಗಳನ್ನು ಕಲಿಯುತ್ತಾರೆ.
- ಮತ್ತೊಂದು ಪ್ರಭಾವ ಬೀರುವ ಘಟಕಾಂಶವೆಂದರೇ ಸಮೂಹ ಮಾಧ್ಯಮ, ಸಮೂಹ ಮಾಧ್ಯಮವು ಶಕ್ತಿಶಾಲಿ ಮತ್ತು ಬಹು ಚರ್ಚಿತವಾದ ಸಾಮಾಜೀಕರಣದ ಸಂಸ್ಥೆಯಾಗಿದೆ.
- ದಿನಪತ್ರಿಕೆಗಳು, ವಾರಪತ್ರಿಕೆಗಳು, ರೇಡಿಯೋ, ಜಾಲತಾಣ, ವಿಡಿಯೋ ಗೇಮ್ಸ್ ಮತ್ತು ಅವುಗಳಲ್ಲಿ ಅತ್ಯಂತ ಪ್ರಧಾನಯುತವಾದ, ದೂರದರ್ಶನವು ಸೇರಿದೆ.
- ಸಮೂಹ ಮಾಧ್ಯಮಗಳು ಜನರಲ್ಲಿ ಆದರ್ಶವಾದ ಮತ್ತು ನಂಬಿಕೆಗಳನ್ನು ಗಟ್ಟಿಗೊಳಿಸಲು ಸಹಾಯಕವಾಗಿದೆ ಮತ್ತು ಅವುಗಳನ್ನು ಬಲಿಷ್ಠ ಮತ್ತು ಆಳವಾಗಿ ಬೇರೂರಿರುವಂತೆ ಮಾಡಿ ಜೀವಿತಾವಧಿಯವರೆಗೆ ಅವರಲ್ಲಿಯೇ ಉಳಿಯುವಂತೆ ಮಾಡುತ್ತವೆ.
- ಈ ಸಂಸ್ಥೆಗಳ ಪ್ರಭಾವವು ಅವುಗಳಲ್ಲಿರುವ ಗುಣಾತ್ಮಕತೆಯ ಮೇಲೆ ಬಹಳಷ್ಟು ಅವಲಂಬಿತವಾಗಿದ್ದು ಅದರ ಪ್ರಭಾವವು ನಮ್ಮ ಜೀವನ ಮತ್ತು ಕ್ರಮೇಣವಾಗಿ ಸಮಾಜದ ಮೇಲೆ ಬೀರುತ್ತದೆ.

(ಯಾವುದಾದರೂ ಐದು ಅಂಶಗಳು) $1 \times 5 = 5$

21. (a) ***ಮೂಲಭೂತ ಕರ್ತವ್ಯಗಳನ್ನು ತರಗತಿಯಲ್ಲಿ ಅನುಷ್ಠಾನಗೊಳಿಸುವಿಕೆ :***

- 51(A) ಅನುಚ್ಛೇದ : ಭಾರತದ ಪ್ರತಿಯೊಬ್ಬ ಪ್ರಜೆಯು ಪಾಲಿಸಲೇಬೇಕಾದ ಕರ್ತವ್ಯಗಳೆಂದರೆ,
- ಸಂವಿಧಾನವನ್ನು ಅನುವರ್ತಿಸುವುದು ಹಾಗೂ ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.
- ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾಗಿದ್ದ ಉದಾತ್ತ ಆದರ್ಶಗಳನ್ನು ಹೃತ್ಪೂರ್ವಕವಾಗಿ ಪೋಷಿಸುವುದು ಹಾಗೂ ಅನುಸರಿಸುವುದು.
- ಭಾರತದ ಸಾರ್ವಭೌಮತ್ವ, ಐಕ್ಯತೆ ಹಾಗೂ ಅಖಂಡತೆಗಳನ್ನು ಸಮರ್ಥಿಸುವುದು ಮತ್ತು ಸಂರಕ್ಷಿಸುವುದು.
- ರಾಷ್ಟ್ರವನ್ನು ಸಂರಕ್ಷಿಸುವುದು ಹಾಗೂ ದೇಶದಕರೆ ಬಂದಾಗ ರಾಷ್ಟ್ರೀಯ ಸೇವೆಯನ್ನು ಸಮರ್ಪಿಸುವುದು.
- ಧಾರ್ಮಿಕ, ಭಾಷಿಕ ಮತ್ತು ಪ್ರಾಂತೀಯ ಅಥವಾ ವರ್ಗ / ಪಂಗಡಗಳ ವೈವಿಧ್ಯತೆಯನ್ನು ಬದಿಗಿಟ್ಟು ಭಾರತದ ಎಲ್ಲಾ ಪ್ರಜೆಗಳಲ್ಲೂ ಸೋದರ ಭಾವ ಹಾಗೂ ಸಾಮರಸ್ಯವನ್ನು ಉತ್ತೇಜಿಸುವುದು ಸ್ತ್ರೀಯರ ಗೌರವಕ್ಕೆ ಚ್ಯುತಿತರುವ ಆಚರಣೆಗಳನ್ನು ವರ್ಜಿಸುವುದು.
- ನಮ್ಮ ಸಂಕೀರ್ಣ ಸಂಸ್ಕೃತಿಯ ಶ್ರೀಮಂತ ಪಂಪರೆಗೆ ಮನ್ನಣೆ ಕೊಡುವುದು ಹಾಗೂ ಸಂರಕ್ಷಿಸುವುದು.

institutes.aglasem.com
aglasem.com

- ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳನ್ನು ಒಳಗೊಂಡಂತೆ ನಮ್ಮ ನೈಸರ್ಗಿಕ ಪರಿಸರವನ್ನು ರಕ್ಷಿಸುವುದು. ಅಭಿವೃದ್ಧಿಗೊಳಿಸುವುದು ಹಾಗೂ ಜೀವಜಂತುಗಳ ಬಗ್ಗೆ ಸಹಾನುಭೂತಿ ಹೊಂದಿರುವುದು.
- ವೈಜ್ಞಾನಿಕ ಮನೋಧರ್ಮ, ಮಾನವೀಯತೆ, ವೈಚಾರಿಕ ಜಿಜ್ಞಾಸೆ ಹಾಗೂ ಸುಧಾರಣೆಗಳನ್ನು ವರ್ಧಿಸುವುದು.
- ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ಸಂರಕ್ಷಿಸುವುದು ಮತ್ತು ಹಿಂಸೆಯನ್ನು ಪರಿತ್ಯೆಜಿಸುವುದು.
- ರಾಷ್ಟ್ರವು ತನ್ನ ಶ್ರೇಷ್ಠತೆ ಮತ್ತು ಸಾಧನೆಗಳನ್ನು ಗರಿಮೆಯನ್ನು ನಿರಂತರವಾಗಿ ಹೆಚ್ಚಿಸಿಕೊಳ್ಳಲು ಎಲ್ಲಾ ಕ್ಷೇತ್ರಗಳಲ್ಲಿನ ವೈಯಕ್ತಿಕ ಹಾಗೂ ಸಾಮೂಹಿಕ ಕಾರ್ಯಚರಣೆಗಳಲ್ಲಿ ಉತ್ಕೃಷ್ಟತೆ ಸಾಧಿಸುವ ಪ್ರಯತ್ನ ಮಾಡುವುದು.
- ತಂದೆ-ತಾಯಿಗಳು ಅಥವಾ ಸಂದರ್ಭಾನುಸಾರ ಪಾಲಕರು 6 ರಿಂದ 14 ವಯೋಮಾನದ ಎಲ್ಲಾ ಮಕ್ಕಳಿಗೂ ಶಿಕ್ಷಣವನ್ನು ಪಡೆಯಲು ಅವಕಾಶಗಳನ್ನು ಒದಗಿಸುವುದು.

(ಯಾವುದಾದರೂ ಐದು ಅಂಶಗಳು) $1 \times 5 = 5$

(b) ***ಮೀಸಲಾತಿ ನೀತಿಯ ಪ್ರಯೋಜನಗಳನ್ನು ತರಗತಿಯ ವಿದ್ಯಾರ್ಥಿಗಳಿಗೆ ತಲುಪಿಸುವಿಕೆ :***

- ಹೆಚ್ಚಿದ ಶೈಕ್ಷಣಿಕ ಅವಕಾಶಗಳು
- ರಾಜಕೀಯ ಹಾಗೂ ಅಧಿಕಾರ ಸ್ಥಾನದಲ್ಲಿ ಹೆಚ್ಚಿನ ಪ್ರಾತಿನಿಧ್ಯ
- ಮೀಸಲಾತಿ ವರ್ಗ / ಸಮುದಾಯಗಳ ಚಲನಶೀಲತೆಯಲ್ಲಿ ಸುಧಾರಣೆ
- ಸಾಮಾಜಿಕ ಸಂಪನ್ಮೂಲದ ಸಮವಿತರಣೆಗೆ ಹೆಚ್ಚಿನ ಅವಕಾಶ
- ಸೌಲಭ್ಯ ವಂಚಿತರೂ ಹಾಗೂ ಅಂಚಿನಲ್ಲಿರುವವರಿಗೆ ಸಾಮಾಜಿಕ ನ್ಯಾಯ ಒದಗಿಸುವುದು.

(ಇವುಗಳ ಸಂಕ್ಷಿಪ್ತ ವಿವರಣೆಯೊಂದಿಗೆ ವಿವರಿಸಿ) $1 \times 5 = 5$

22. (a) ***"ಒಳಗೊಳ್ಳುವ ಪ್ರಕ್ರಿಯೆಗೆ ಋಣಾತ್ಮಕ ಮನೋಭಾವ ಒಂದು ದೊಡ್ಡ ಅಡೆತಡೆ" ಈ ಹೇಳಿಕೆಯ ವಿಶ್ಲೇಷಣೆ :***

- ಒಳಗೊಳ್ಳುವಿಕೆ ಇರುವ ದೊಡ್ಡ ಅಡೆತಡೆ ಎಂದರೆ ಸಾಮಾನ್ಯವಾಗಿ ಋಣಾತ್ಮಕ ಮನೋಭಾವನೆಯಾಗಿದ್ದು ಇದು ಪ್ರಾಥಮಿಕ ಜ್ಞಾನದ ಕೊರತೆಯಿಂದ ಬರುತ್ತದೆ.
- ದಲಿತ / ಬುಡಕಟ್ಟು ಜನಾಂಗದ ಮಕ್ಕಳ ಶೈಕ್ಷಣಿಕ ಸಾಮರ್ಥ್ಯದಲ್ಲಿ ಕೊರತೆಯಿದೆ ಎಂಬ ಮನೋಭಾವನೆ ವ್ಯಾಪಕವಾಗಿದೆ.

institutes.aglasem.com
aglasem.com

- ಶಿಕ್ಷಕರು ಆರ್ಥಿಕವಾಗಿ ಹಿಂದುಳಿದ ಹಿನ್ನೆಲೆಯಿಂದ ಬಂದ ಮಕ್ಕಳೊಡನೆ ಕೆಲಸ ಮಾಡುವ ಸಂದರ್ಭದಲ್ಲಿ ಆ ಮಕ್ಕಳು ಕಲಿಕೆಯಲ್ಲಿ ಹಿಂದುಳಿದಾಗ ಅವರ ಪೋಷಕರನ್ನು ಹೊಣೆ ಮಾಡುತ್ತಾರೆ.
- ದೈಹಿಕ ಶಿಕ್ಷೆಯ ವಿರುದ್ಧ ಕಾನೂನಿದ್ದರೂ, ಅದು ಅತಿರೇಕಕ್ಕೆ ಹೋಗಿದೆ.
- ಅನೇಕ ಶಿಕ್ಷಕರುಗಳ ನಂಬಿಕೆ ಏನೆಂದರೆ ನ್ಯೂನತೆಯುಳ್ಳ ಮಕ್ಕಳು ಮುಖ್ಯವಾಹಿನಿ ತರಗತಿಗಳಲ್ಲಿ ಸಾಮಾನ್ಯ ಪಠ್ಯಕ್ರಮವನ್ನು ನಿಭಾಯಿಸಲು ಸಾಧ್ಯವಿಲ್ಲ.
- ವಿಭಿನ್ನವಾದ ಸಾಮರ್ಥ್ಯವುಳ್ಳವರೆಂದು ನೋಡುವ ಅಗತ್ಯವಿದೆ ಮತ್ತು ಸಮಾಜದಲ್ಲಿ ಅವರ ಒಳಗೊಳ್ಳುವಿಕೆಯನ್ನು ಖಚಿತಪಡಿಸಬೇಕು.

(ಯಾವುದಾದರೂ ಐದು ವಿಶ್ಲೇಷಣೆಗಳು) $1 \times 5 = 5$

ಅಥವಾ

(b) ***"ಒಂದು ತರಗತಿಯಲ್ಲಿ ವೈವಿಧ್ಯತೆ ಸಮಸ್ಯೆ ಎಂದು ಪರಿಗಣಿಸುವ ಬದಲಿಗೆ ಸಂಪನ್ಮೂಲವೆಂದು ಬಳಕೆಯಾಗಬೇಕು." ಈ ಹೇಳಿಕೆಯ ವಿಶ್ಲೇಷಣೆ :***

- ಪ್ರತಿ ಮಗು ಮತ್ತು ಮಕ್ಕಳ ಮನೆಗಳು, ಸಮುದಾಯಗಳ ಭಾಷೆಗಳು ಮತ್ತು ಸಂಸ್ಕೃತಿಗಳೆಲ್ಲವೂ ವಿಮರ್ಶಿಸಲು ಮತ್ತು ವಿಚಾರ ಮಾಡಲು ಸಂಪನ್ಮೂಲಗಳಾಗಿವೆ.
- ಪ್ರತಿ ಮಗುವನ್ನು ಗೌರವಿಸುವುದು, ಸಮತಾ ಸಮಾಜದ ಒಂದು ಭಾಗವಾಗಿ ವೈವಿಧ್ಯೆಯನ್ನು ಸ್ವೀಕರಿಸುವ ತರಗತಿ ಸಂಸ್ಕೃತಿ ವಿಕಾಸಗೊಳ್ಳಲು ಆಸ್ತಿವಾರ ನೀಡುತ್ತದೆ.
- ಅವರ ಸ್ವಂತ ಅನುಭವಗಳ ಹಂಚಿಕೆ ಮತ್ತು ಪ್ರಶ್ನೆ ಕೇಳಲು ಉತ್ತೇಜಿಸುವುದು.
- ಶಾಲೆಗಳು ಏಕಪ್ರಕಾರವಾಗಿ ಅನಪೇಕ್ಷಣೀಯ ಎಂದು ಪರಿಗಣಿಸಿ ಇದನ್ನು ನಾಚಿಕೆ ವಿಷಯವೆಂದು ಮಕ್ಕಳು ಭಾವಿಸುವಂತೆ ಮಾಡುತ್ತವೆ.
- ಪ್ರಶ್ನೆಗಳನ್ನು ಎತ್ತುವುದು ಸಂವಹನ ನಡೆಸಲು ಪ್ರಶ್ನೆಗಳು ಮಹತ್ವ ಪಡೆದಿವೆ. ಎಲ್ಲಾ ಮಕ್ಕಳೂ ಪ್ರಶ್ನೆಗಳನ್ನು ಕೇಳುವಂತೆ ಪ್ರೋತ್ಸಾಹಿಸುವುದು.
- ವಿವರಣೆಯನ್ನು ಅವರ ಸ್ವಂತ ಆಯ್ಕೆ ಶೈಲಿಯಲ್ಲಿ ವಿವರಿಸಲು ಒದಗಿಸುವುದು.

(ಯಾವುದಾದರೂ ಐದು ಅಂಶಗಳ ವಿವರಣೆ) $1 \times 5 = 5$

23. (a) ***ಆಟದ ಕಾರ್ಯಗಳ ಸಂಕ್ಷಿಪ್ತ ವಿವರಣೆ :***

- ಆಟವು ವ್ಯಕ್ತಿತ್ವದ ವಿಭಿನ್ನ ಪ್ರಕಾರಗಳ ದೈಹಿಕ ವಿಕಾಸ, ಸಾಮಾಜಿಕ ವಿಕಾಸ, ಭಾವನಾತ್ಮಕ ವಿಕಾಸ, ಮಾನಸಿಕ ವಿಕಾಸ, ನೈತಿಕ ಆದರ್ಶ ವಿಕಾಸ ಒಳಗೊಂಡಿದೆ.
- ದೈಹಿಕ ವಿಕಾಸ
- ಭಾವನಾತ್ಮಕ ವಿಕಾಸ

institutes.aglasem.com

aglasem.com

- ಮಾನಸಿಕ ವಿಕಾಸ
- ಸಾಮಾಜಿಕ ವಿಕಾಸ
- ನೈತಿಕತೆ ವಿಕಾಸ

(ಇವುಗಳ ಸಂಕ್ಷಿಪ್ತ ವಿವರಣೆ) $1 \times 5 = 5$

ಅಥವಾ

(b) ಕಲಿಕೆಯ ನಾಲ್ಕು ಗುಣಲಕ್ಷಣಗಳನ್ನು ಪಟ್ಟಿಮಾಡಿ ಕಲಿಕೆಯ ಪರಿಕಲ್ಪನೆಯನ್ನು ಸ್ಪಷ್ಟಪಡಿಸಬಹುದಾದ ಅಂಶಗಳನ್ನು ಕೆಳಗಿನವುಗಳನ್ನು ಒಳಗೊಂಡಿದೆ.

- ಕಲಿಕೆಯು ಉದ್ದೇಶಪೂರಕ
- ಕಲಿಕೆಯು ಅನುಭವಗಳ ಫಲ
- ಕಲಿಕೆಯು ಬಹುಮುಖಿ
- ಕಲಿಕೆಯು ಒಂದು ಸಕ್ರಿಯವಾದ ಪ್ರಕ್ರಿಯೆ

- ಕಲಿಕೆಯು ಅನುಭವಗಳ ಫಲ :
  - ಎಲ್ಲಾ ಕಲಿಕೆಯು ಅನುಭವಗಳೊಂದಿಗೆ ಜರುಗುತ್ತವೆ.
  - ಈ ಅನುಭವಗಳು ನೈಜ ಹಾಗೂ ಕೃತಕವಾಗಿದ್ದು
  - ವೈವಿಧ್ಯ ಶ್ರೇಣಿಯ ಶ್ರೀಮಂತಿಕೆಯನ್ನು ಮತ್ತು ಆಳವನ್ನು ಹೊಂದಿರುವ ವಿವಿಧ ರೂಪಗಳಲ್ಲಿ ಕಲಿಕೆ ಉಂಟಾಗುತ್ತದೆ.
  - ಆಳವಾದ ಕಲಿಕೆಯು, ಮೂರ್ತತೆ ಮತ್ತು ಪ್ರತ್ಯಕ್ಷ ಅನುಭವಗಳಿಗೆ ಮಾತ್ರ ಸಾಧ್ಯವಾಗುತ್ತದೆ.

ಅಂಶಗಳಿಗೆ 2

ಒಂದನ್ನು ವಿವರಿಸುವುದಕ್ಕೆ 3

24. (a)
- ನಾವೆಲ್ಲರೂ ಒಂದಲ್ಲ ಒಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ಗುಂಪಿಗೆ ಸೇರಿದವರಾಗಿದ್ದೇವೆ.
- ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಪ್ರಭಾವಗಳ ಕಾರಣದಿಂದಾಗಿ ನಾವೆಲ್ಲರೂ ಒಂದೇ ರೀತಿಯಲ್ಲಿ ಸಾಮಾಜೀಕರಣಗೊಳ್ಳುವುದಿಲ್ಲ.
- ಜೈವಿಕ ಜೀವಿಯ ಘಟಕಾಂಶಗಳ ಜೊತೆ-ಜೊತೆಗೆ ಸಾಮಾಜಿಕ-ಸಾಂಸ್ಕೃತಿಕ ಘಟಕಾಂಶಗಳ ಪ್ರಭಾವಗಳಲ್ಲೂ ಭಿನ್ನ.
- ಸಾಮಾಜೀಕರಣವು ನಮ್ಮ ವಿಚಾರಗಳು, ಅನುಭೂತಿಗಳು ಮತ್ತು ಕ್ರಿಯೆಗಳಿಗೆ ಆಕಾರ ನೀಡಿ, ಸಹಾಯ ನೀಡಿ. ವರ್ತನೆಗಳ ನಮೂನೆಯನ್ನು ಸಹಾ ಒದಗಿಸುತ್ತದೆ.

institutes.aglasem.com
aglasem.com

- ಸಾಮಾಜೀಕರಣವು ಸಾಂಸ್ಕೃತಿಕ ಮೌಲ್ಯಗಳು ಮತ್ತು ಮಾನದಂಡಗಳ ಮಾರ್ಗದರ್ಶಿತ ಸೂಚನೆಗಳ ಬೋಧನೆಯನ್ನು ಸಹಾ ಒದಗಿಸುತ್ತದೆ.
- ಮಕ್ಕಳು ತಮ್ಮ ಸ್ನೇಹಿತರ ಸಾಮಾಜಿಕ-ಸಾಂಸ್ಕೃತಿಕ ಹಿನ್ನಲೆಗಳಿಂದ ಕಲಿಯುವುದರ ಮೂಲಕ ಈ ಸಮಸ್ಯೆಯನ್ನು ಬಹಳಷ್ಟು ಮಟ್ಟಿಗೆ ಪರಿಹರಿಸಬಹುದಾಗಿದೆ.
- ನಿರ್ದಿಷ್ಟವಾದ ಸಮೂಹದ ಜನರು ತಮ್ಮೊಳಗೆ ಹಂಚಿಕೊಳ್ಳುವ ನಂಬಿಕೆಗಳು, ಮೌಲ್ಯಗಳು, ವರ್ತನೆ ಮತ್ತು ಭೌತಿಕ ವಸ್ತುಗಳನ್ನೇ ಸಂಸ್ಕೃತಿಯೆಂದು ವ್ಯಾಖ್ಯಾನಿಸಬಹುದು.
- ನಮ್ಮ ಸಂಸ್ಕೃತಿಯು ನಾವು ಧರಿಸುವ ವಸ್ತ್ರಗಳು ಆಹಾರ ಮತ್ತು ವಿರಾಮಕಾಲವನ್ನು ಹೇಗೆ ವ್ಯಯಿಸುತ್ತೇವೆ ಎಂಬುದರ ಪ್ರತಿಫಲನಗೊಳ್ಳುತ್ತದೆ.
- ಕೆಲವು ಸಂಸ್ಕೃತಿಗಳು ಸ್ಪರ್ಧಾತ್ಮಕತೆಯನ್ನು ಮೌಲ್ಯೀಕರಿಸಿದರೆ ಮತ್ತೆ ಕೆಲವು ಸಹಕಾರವನ್ನು ಉತ್ತೇಜಿಸುತ್ತವೆ.
- ಸಂಸ್ಕೃತಿಯು ಒಂದು ಗುಂಪಿನ ತತ್ವಗಳು ಮತ್ತು ಸಂಪ್ರದಾಯಗಳನ್ನು ಹೊಂದಿದ್ದು ಅದು ತಲೆತಲಾಂತರಗಳಿಗೆ ವರ್ಗಾಯಿಸಲ್ಪಡುತ್ತದೆ.

(ಯಾವುದಾದರೂ ಐದು ಅಂಶಗಳ ವಿವರಣೆ) $1 \times 5 = 5$

ಅಥವಾ

(b) ***ಶೈಕ್ಷಣಿಕ ಸಮಾಜಶಾಸ್ತ್ರದ ವ್ಯಾಪ್ತಿಯು ಒಳಗೊಂಡಿರುವ ಅಂಶಗಳು :***

- ಸಮಾಜ, ಸಂಸ್ಕೃತಿ, ಸಮುದಾಯ, ವರ್ಗ, ಪರಿಸರ, ಸಾಮಾಜೀಕರಣ, ಅಂತರೀಕರಣ, ಸ್ಥಳಾವಕಾಶ ಒದಗಿಸುವಿಕೆ.
- ಸಾಮಾಜಿಕ ವ್ಯವಸ್ಥೆ ಮತ್ತು ಸಮಾಜ ಚಿಕ್ಕ ಘಟಕವಾದ ಶಾಲೆಯಲ್ಲಿರುವ ವಿವಿಧ ಪಾತ್ರಗಳು ಪ್ರಾಧಿಕಾರ, ಆಯ್ಕೆ, ಕಲಿಕೆಯ ಸಂಘಟನೆ, ಮುಖ್ಯವಾಹಿನಿಗೆ ತರುವುದು.
- ಶೈಕ್ಷಣಿಕ ಸನ್ನಿವೇಶಗಳನ್ನು ವಿವಿಧ ಭೌಗೋಳಿಕ ಮತ್ತು ಜನಾಂಗೀಯ ಸಂದರ್ಭಗಳನ್ನು ವಿಶ್ಲೇಷಿಸುವುದು.
- ವಿವಿಧ ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ಶಾಲೆ ಇತರೆ ವಿದ್ಯಾರ್ಥಿಗಳ ಮೇಲೆ ಪ್ರಭಾವಬೀರುವುದನ್ನು ತಿಳಿಯುವುದು.
- ವಿದ್ಯಾರ್ಥಿಗಳಿಗೆ ಶಿಕ್ಷಣದ ವಿಧದ ಮೇಲೆ ಅರ್ಥಶಾಸ್ತ್ರದ ಪ್ರಭಾವವನ್ನು ತಿಳಿಯುವುದು
- ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದಲ್ಲಿ ಶಾಲೆಯ ರಚನೆ, ಸಮವಯಸ್ಕರ ಸಮೂಹ ಅಧ್ಯಯನ ಮಾಡುವುದು.
- ಸಾಮಾಜಿಕ ವರ್ಗ, ಸಂಸ್ಕೃತಿ, ಭಾಷೆ, ಪಾಲಕರ ವಿದ್ಯಾರ್ಹತೆ ಸಾಧನೆಯ ನಡುವಿನ ಸಂಬಂಧವನ್ನು ಅಧ್ಯಯನ ಮಾಡುವುದು.

institutes.aglasem.com

aglasem.com

25. (a) ***ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಆಟದ ಸೂಕ್ತ ಐದು ಶೈಕ್ಷಣಿಕ ನಿಹಿತಾರ್ಥಗಳು :***

- ಮಕ್ಕಳ ಅಗತ್ಯತೆ ಮತ್ತು ಸಾಮರ್ಥ್ಯಗಳನ್ನು ತಿಳಿಯುವುದು.
- ಶಾಲೆಯಲ್ಲಿ ಆಟಕ್ಕೆ ಸಂಪೂರ್ಣ ಮಹತ್ವವನ್ನು ಒದಗಿಸುವುದು.
- ಬೆಳವಣಿಗೆಗೆ ಸೂಕ್ತವಾದ ಅವಕಾಶಗಳನ್ನು ಮಕ್ಕಳಿಗೆ ಒದಗಿಸುವುದು.
- ಆಟ ಮತ್ತು ಪಂದ್ಯಗಳಿಗೆ ನಿಗದಿಪಡಿಸಿರುವ ಸಮಯದಲ್ಲಿ ರಾಜಿ ಬೇಡ.
- ಎಲ್ಲಾ ಕಲಿಯುವವರ ಒಳಗೊಳ್ಳುವಿಕೆ.

(ಮೇಲಿನ ಎಲ್ಲಾ ಅಂಶಗಳ ಸಂಕ್ಷಿಪ್ತವಾದ ವಿವರಣೆ) $1 \times 5 = 5$

ಅಥವಾ

(b) ***ಪಿಯಾಜೆ ಸಿದ್ಧಾಂತದ ಶೈಕ್ಷಣಿಕ ನಿಹಿತಾರ್ಥಗಳಲ್ಲಿ ಕಾರ್ಯಪೂರ್ವ ಹಂತ ಹಾಗೂ ಔಪಚಾರಿಕ ಕಾರ್ಯ ಹಂತಗಳು :***

ಪಿಯಾಜೆಯವರ ಸಿದ್ಧಾಂತವನ್ನು ಶಿಕ್ಷಕರು ಬೋಧನಾ ಕಲಿಕೆಯ ಸನ್ನಿವೇಶಗಳಲ್ಲಿ ತಿಳಿಯುವುದು ಸೂಕ್ತವಾಗಿದೆ.

ಕಾರ್ಯ ಪೂರ್ವದ ಹಂತ : ಈ ಹಂತದಲ್ಲಿ ಹೆಚ್ಚು ದೃಶ್ಯಾವಳಿಗಳನ್ನು ಉಪಯೋಗಿಸಿ ಅವುಗಳಲ್ಲಿ ಭೌತಿಕ ಅಂಶಗಳಿಗೆ ಒತ್ತು ನೀಡಿ.

- ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಕಲಿಯುವುದರಿಂದ ಸ್ವ-ಅನುಭವ ನೀಡುವ ಸನ್ನಿವೇಶಗಳನ್ನು ಒದಗಿಸಿ.
- ಈ ಎಲ್ಲಾ ಕ್ರಿಯೆಗಳು ವಿದ್ಯಾರ್ಥಿಗಳ ಸ್ಥಿತಿಸ್ಥಾಪಕತ್ವ ಮತ್ತು ತಾರ್ಕಿಕ ಚಿಂತನೆಯನ್ನು ಮೂಡಿಸುತ್ತದೆ. 3

ಔಪಚಾರಿಕ ಕಾರ್ಯ ಹಂತ :

- ಬೋಧನಾ ತಂತ್ರಗಳು ಹಾಗೂ ಬೋಧನಾ ಸಾಮಾಗ್ರಿಗಳನ್ನು ಇಲ್ಲಿಯೂ ಸಹ ಬಳಸಬೇಕು.
- ಪ್ರಾಕಲ್ಪನೆಯುಕ್ತ ಪ್ರಶ್ನೆಗಳಿಗೆ ಉತ್ತರಿಸಲು ಅವಕಾಶಗಳನ್ನು ನೀಡಿ.
- ವಿದ್ಯಾರ್ಥಿಗಳು ಸಮಸ್ಯೆಗಳನ್ನು ಹೇಗೆ ಬಗೆಹರಿಸಿದರು ಎಂಬುದನ್ನು ವಿವರಿಸಲು ಜೋಡಿಯಾಗಿ ಸಮಸ್ಯೆಯನ್ನು ಬಿಡಿಸಲು ಅನುವು ಮಾಡಿ.
- ಆ ಪ್ರಶ್ನೆಗಳಿಗೆ ವಿದ್ಯಾರ್ಥಿಯು ಕೇವಲ ಸ್ಮರಣೆಯಿಂದ ಮಾತ್ರವಲ್ಲದೆ ವಿವಿಧ ಅಂಶಗಳಿಂದ ಉತ್ತರಿಸಬೇಕಾಗುತ್ತದೆ. 2

institutes.aglasem.com
aglasem.com

26. (a) ***ಪ್ರತಿಭಾನ್ವಿತ ಮಕ್ಕಳಿಗೆ ಕಲಿಕೆಯನ್ನು ಹೆಚ್ಚು ಆಸಕ್ತಿದಾಯಕ ಮತ್ತು ಹೆಚ್ಚು ಸಮಂಜಸ ಮಾಡಲು ತೆಗೆದುಕೊಳ್ಳುವ ಕ್ರಮಗಳು :***

- ವಿಷಯಗಳ ನಡುವೆ ಸಂಬಂಧ ಕಲ್ಪಿಸುವುದು.
- ತರಗತಿ ಕಲಿಕೆ ಮತ್ತು ಮಕ್ಕಳ ನೈಜ ಜೀವನದ ಅನುಭಗಳ ನಡುವೆ ಸಂಬಂಧ ಕಲ್ಪಿಸುವುದು.
- ಪ್ರತಿ ಮಗುವಿನ ಅಗತ್ಯಗಳು ಮತ್ತು ಸಾಮರ್ಥ್ಯಗಳನ್ನು ಪೂರೈಸುವುದು.
- ಪಠ್ಯಕ್ರಮವನ್ನು ವೈವಿಧ್ಯಗೊಳಿಸುವುದು.
- ಮಕ್ಕಳು ಹೇಗೆ ಕಲಿಯುತ್ತಾರೆ ಎಂಬುದನ್ನೇ ಮಾಪನ ಮಾಡಬೇಕು.
- ಎಲ್ಲಾ ಮಕ್ಕಳ ಶಕ್ತಿಗಳು ಮತ್ತು ದುರ್ಬಲತೆಗಳನ್ನು ಗುರುತಿಸುವುದು.
- ಅನೇಕ ವಿಧಾನ ಮತ್ತು ಮಾಹಿತಿ ಮೂಲಗಳನ್ನು ಬಳಸಬೇಕು.

(ಐದು ಕ್ರಮಗಳನ್ನು ತಿಳಿಸಿ) $1 \times 5 = 5$

ಅಥವಾ

(b) ***ವಿವಿಧ ಹಿನ್ನೆಲೆಗಳಿಂದ ಬಂದಂತಹ ಮಕ್ಕಳಿಗೆ ಅವಕಾಶಗಳನ್ನು ಕಲ್ಪಿಸಲು ತೆಗೆದುಕೊಳ್ಳಬಹುದಾದ ಕ್ರಮಗಳು :***

- ಮಗುವಿನ ವೈಯಕ್ತಿಕ ಅಗತ್ಯಗಳು ಮತ್ತು ಸಾಮರ್ಥ್ಯವನ್ನು ಒಪ್ಪಿಕೊಳ್ಳುವ ಮೂಲಕ ಶಿಕ್ಷಣ ಉತ್ತಮಪಡಿಸುವುದು.
- ಕೆಲವು ಕುಟುಂಬ, ಸಮುದಾಯಗಳು ಮತ್ತು ಶಿಕ್ಷಣ ವ್ಯವಸ್ಥೆ ಇವರ ಅಗತ್ಯಗಳು ಮತ್ತು ಹಕ್ಕುಗಳಿಗೆ ಹೆಚ್ಚು ಸ್ಪಂದಿಸುವುದಾದರೆ ಅವರೂ ಕೂಡ ಹಾಜರಾಗಬಹುದು.
- ಎಲ್ಲಾ ಮಕ್ಕಳು ಗುಣಾತ್ಮಕ ಶಿಕ್ಷಣವನ್ನು ಒದಗಿಸುವ ಮಕ್ಕಳ ಹಕ್ಕುಗಳ ಕಾಯಿದೆ ಆಜ್ಞೆಯನ್ನು ಪೂರೈಸಬೇಕಾಗಿದೆ.
- ಹಿಂದುಳಿದ ಗುಂಪಿನ ಮಕ್ಕಳು ಇತರರೊಂದಿಗೆ ಕಲಿಯಬಹುದು ಎಂಬುದರ ಬಗ್ಗೆ ಇದು ಒಂದು ಮಾರ್ಗಕ್ಕೆ ಅಡಿಪಾಯ ಹಾಕುತ್ತದೆ.
- ತರಗತಿ ಕಲಿಕೆಯ ಸಲುವಾಗಿ ಸೃಜನಾತ್ಮಕ ಮಾರ್ಗಗಳನ್ನು ಅಭಿವೃದ್ಧಿಪಡಿಸಲು ಶಿಕ್ಷಕರಿಗೆ ಕಲಿಕಾದಾರರ ವೈವಿಧ್ಯತೆ ಅವಕಾಶಗಳನ್ನು ಒದಗಿಸುವುದು.
- ಆರ್ಥಿಕವಾಗಿ ಹಿಂದುಳಿದವರಿಗೆ ಸರ್ಕಾರದ ಸೌಲಭ್ಯಸಿಗುವಂತೆ ಮಾಡುವುದು.
- ಶಿಕ್ಷಣವನ್ನು ಪ್ರೋತ್ಸಾಹಿಸಲು ಪ್ರತಿಭಾನ್ವಿತ ಮಕ್ಕಳಿಗೆ ಶಿಷ್ಯವೇತನದ ಸೌಲಭ್ಯಗಳನ್ನು ಒದಗಿಸುವುದು.
- ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಒತ್ತು ನೀಡುವುದು ಮತ್ತು ಪ್ರೋತ್ಸಾಹಿಸುವುದು.

(ಇನ್ನುಳಿದ ವಿವರಣೆಗಳನ್ನು ಪರಿಶೀಲಿಸಿ ನೋಡಿ) $1 \times 5 = 5$

institutes.aglasem.com

aglasem.com

(English Version)

PART – I

Four choices have been given for each of the following questions. Choose the most appropriate answer and write in the answer-book. All the questions are compulsory.

1 × 10 = 10

1. (B) Diva Swapna
2. (A) Only II
3. (C) School dropout rate has decreased
4. (B) Teacher-Student relationship
5. (A) Concrete operational stage
6. (B) day dreaming
7. (D) Focusing on knowledge reproduction
8. (A) Creativity
9. (C) 86th (1)
10. (C) Providing free and compulsory education

PART – II

Answer any *five* of the following questions, each answer not exceeding *half a* page. 2 × 5 = 10

11.
- Reflecting own practice
- Making informed judgments in complex environments
- Continuously striving to improve teaching
- Examining own strategies and approaches and its effect on student's learning
- Not simply doing work but thinking too
- Developing a constant critical look at the process of teaching and learning and at one's own work
- Extensive reading and writing.

(Suitable *four* points to be considered) $\frac{1}{2} \times 4 = 2$

institutes.aglasem.com

aglasem.com

12.
- Children learn to share toys and other resources
- Peers may reinforce behaviour that is stressed by parents and schools
- They learn acceptable behaviours
- They influence inside and outside school also
- Share activities, discuss different issues.

(Suitable 4 points) $\frac{1}{2} \times 4 = 2$

13.
- Develop commitment to democracy and the value of quality
- Foster independence of thought and action and a capacity
- Inculcate sensitivity to other's feelings
- Cultivate respond capacity to new situations in a flexible manner
- Ensure ability to work and participate in economic processes
- Enable appreciation of beauty and art forms.

(Suitable *four* aims) $\frac{1}{2} \times 4 = 2$

14. This is an age or period where children are fond of quarrelling with their siblings, especially if they have siblings of opposite sex. Teasing, playing pranks, fighting, picking up arguments are very common.

15.
- Learning can be assessed by using certain tools and techniques
- Using achievement test, diagnostic test, formative assessment, summative assessment, peer assessment and self assessment.

$1 \times 2 = 2$

16.
- Placing the students in front rows if they have low vision problem
- Providing hand lens for low vision children
- Not placing furniture in a random way or in wrong place
- If there are resources without audio explaining to them.

(Suitable *four* points) $\frac{1}{2} \times 4 = 2$

17.
- All children in school education guarantee centre, back to school camp by 2003
- All children complete five years of primary schooling by 2007

institutes.aglasem.com

aglasem.com

- All children complete 8 years of elementary schooling by 2010
- Focus on elementary education of satisfactory quality
- Bridge all gender and social category gaps
- Universal retention by 2010. $\frac{1}{2} \times 4 = 2$

18.
- It is a dynamic process because it involves multiple activities & relationships
- It is constructed, co-constructed and reconstructed through parents, peers, teachers and so on
- It includes imitation, identification
- It encompasses 'I' and 'me'. $\frac{1}{2} \times 4 = 2$

PART – III

There is an alternate question for each of the following. Answer either 'a' or 'b' of them, each answer not exceeding *one* page. 5 × 8 = 40

19. (a)
- Period of carelessness
- Troublesome age for parents
- Quarrelsome age
- Gang age
- Age of conformity
- Critical period of achievement
- Creativity age
- Play age
- Elementary school age

(Brief explanation of any suitable *five* characteristics) 1 × 5 = 5

OR

(b) Characteristics of Adolescence :
- A transitional period
- Problem age
- Period of search for identity
- A dreaded age
- Period of idealism
- Threshold to adulthood.

(Explanation of suitable *five* characteristics)

1 × 5 = 5

institutes.aglasem.com

aglasem.com

20. (a)
- Human beings are basically social animals
- From birth to throughout our lives interactions with others shape our understanding
- Education and learning is a social effort and runs the way society wants
- Education and learning reflects social effort
- Learning occurs everywhere in the society — Library, Park etc.
- Language is developed through social interactions.

(*Five* aspects to be elaborated) $1 \times 5 = 5$

OR

(b) Community and mass media :

- Community provides a large network that families can use as a support
- It shares common traditions, customs, norms and a culture
- It develops self-identity and group identity
- It promotes self-control, social skills and values of society
- Mass media provides lot of ideas and information
- It helps in building ideologies and beliefs of people.

(Suitable *five* aspects are be mentioned) $1 \times 5 = 5$

21. (a)
- Article 51(A) : It shall be the duty of every citizen of India to abide by the constitution and respect its ideals and institutions
- to cherish and follow the noble ideals which inspired freedom
- to uphold and protect the sovereignty, unity and integrity of India
- to defend the country and render national service
- to promote harmony and spirit of common brotherhood
- to value and preserve the rich heritage of our culture
- to protect & improve natural environment
- to develop scientific temper, spirit of inquiry
- to strive towards excellence.

(Implementation of any *five*) $1 \times 5 = 5$

OR

institutes.aglasem.com

aglasem.com

(b)
- Increased educational opportunities
- Increased motivation of dalit and adivasi students
- Increased representation in political places of power
- Improved mobility of reserved categories
- Social justice to the deprived
- Even spread of social capital.

(Linking of any *five* suitable benefits and explanation) $1 \times 5 = 5$

22. (a)
- Stereotypes of lack of academic ability of dalit / tribal children are widespread
- Teachers catering to children coming from poor economic background accuse their parents for the children's poor performance
- Corporal punishment is rampant in spite of a law against it.
- Many teachers believe that children with disabilities cannot cope up with regular curriculum
- About gifted children teachers think that the child has everything to succeed and if we label a gifted child it becomes arrogant.

(Analysis based on above aspects) $1 \times 5 = 5$

OR

(b) <u>Diversity as a resource</u> :
- To value children from diverse backgrounds form the basis for inclusive education
- To value every child also forms the basis for developing a classroom culture of accepting diversity as a part of egalitarian society
- A diverse classroom always has the potential for dynamic interaction and broadening knowledge base
- It helps in sharing their own experience from different backgrounds

institutes.aglasem.com
aglasem.com

- It provides ample opportunities for group work with diverse experiences.

(Analysis of suitable *five* aspects to be considered) $1 \times 5 = 5$

23. (a) Functions of Play

- Physical development
- Social development
- Emotional development
- Cognitive development
- Moral development

(Brief explanation of above functions) $1 \times 5 = 5$

OR

(b) Characteristics of Learning :

- Learning is purposeful
- Learning is a result of experience
- Learning is multifaceted
- Learning is an active process.

(Listing out *four* characteristics - 2 marks
Brief explanation of any *one* - 3 marks) (2 + 3) = 5

24. (a) Role of social and cultural differences in socialization :

- We have become whatever we are, is because of the influence of social and cultural elements
- All of us do not get socialized identically - therefore we differ
- We behave in different ways from others
- We respond and react to different situations according to the way we see these situations and how we think
- It helps to shape and define our thoughts and actions
- Our culture gets reflected in our way of eating, dressing and so on
- Culture provides framework for our life.

(Suitable *five* aspects to be explained) $1 \times 5 = 5$

OR

institutes.aglasem.com

aglasem.com

(b)
- Studying the general concepts such as society itself, culture, community, class, socialization, etc.
- Understanding the cases of education and social class, state, social force and cultural change, various problems, role analysis etc.
- Analysing the educational situations in various geographical and ethnological contexts
- Understanding the effect of economy upon the types of education provided to the students.
- Understanding the effect of various social agencies like family, school on students
- Studies the relationship between social class, culture, language etc.
- Studies the role and structure of school, peer group on the personality of students.

(*Five* aspects to be explained) $1 \times 5 = 5$

25. (a)
- Understanding children, their needs and abilities
- Providing full scope for play in schools
- Providing developmentally appropriate opportunities to children
- Not compromising on the time allotted for play and games
- Involving all learners.

(Suitable 5 educational implications) $1 \times 5 = 5$

OR

(b) Pre-operational stage :
- Using illustrative visual aids to help children understand presentations
- Using plenty of physical properties
- Using illustrations at art work
- Physical and hands on practice with facts and skills needed
- Using cut out letters to build words
- Encouraging hands on activities. 3

Formal operational stage :
- Use visual aids like charts etc.
- Include sophisticated graphs and diagrams

institutes.aglasem.com

aglasem.com

- Provide opportunity for hypothetical question-answers
- Give essay questions which require more than one final answer. 2

26. (a)
- Offering advanced, intellectually stimulating problems
- Providing appropriate stimulation, challenge and support to fulfil their potential
- Identifying them in the early days of their schooling
- Appreciating their intellectual capacity and motivating them honestly
- See that they are not let aloof
- Providing adequately challenging work to develop good work habits
- Conducting creativity, achievement tests and specific aptitude test to encourage them.

(Suitable 5 measures) $1 \times 5 = 5$

OR

(b)
- Encouraging Dalit and Adivasi children and motivating them to achieve education
- Economically deprived children specially street and slum children should be enrolled in school and facilitates to be provided
- Gender equality specially for the girl child from vulnerable caste and community should be taken care of.
- Children with disabilities should be encouraged and essential facilities to be organized
- Gifted children with special inputs and challenges need to be taken care of.

(Suitable *five* measures to be mentioned)

$1 \times 5 = 5$

institutes.aglasem.com

aglasem.com